ಸೈನಿಕರನ್ನು ಬರೀ ಆದೇಶದ ಗುಲಾಮರೆಂದು ತಿಳಿದುಕೊಳ್ಳಬಾರದು. ಮುಳ್ಳಿನ ತಂತಿಗಳ ಹಿಂದೆ ಒಂದರ ಮೇಲೊಂದು ಒಟ್ಟಲಾಗಿರುವ ಮರಳಿನ ಚೀಲಗಳ ಹಿಂದೆ ಕುಳಿತಿರುವ ಐದು ಹತ್ತು ಸೈನಿಕರು ಹಾಗೂ ಲಾನ್ಸ್‌ನಾಯಕ ಸಾಯಂಕಾಲದ 'ಅಸರ್ ಕಿ ನಮಾಜ' ಮಾಡುತ್ತಿದ್ದರು. ಅವರು ವೃತ್ತಪತ್ರಿಕೆಯ ಕಾಗದಗಳನ್ನು ಅದೆಲ್ಲಿಂದ ಹೊಂದಿಸಿಕೊಂಡಿದ್ದರೋ ಗೊತ್ತಿಲ್ಲ. ಅದೇ ಕಾಗದಗಳನ್ನು ನಮಾಜಿನ ಸಲುವಾಗಿ ಬಳಸಿಕೊಂಡಿದ್ದರು. ಅವುಗಳ ಮೇಲೆ ಕುಳಿತುಕೊಂಡು ಸಜ್ದಾ ಮಾಡುತ್ತಿದ್ದರು. ಅದನ್ನು ಕಂಡು ಸರ್ಫರಾಜ್ ಸುಮ್ಮನೆ ನಾಲ್ಕು ಹೆಜ್ಜೆ ಅತ್ತಿತ್ತ ಸುತ್ತಾಡಿದರು. ನಮಾಜಿನ ನಂತರ 'ಯಾಕೆ ನಸೀಮ್, ಮನೆಯ ಕಡೆಯದೇನು ಸುದ್ದಿ? ಅಪ್ಪನೊಂದಿಗೆ ಮಾತಾಡಿದೆಯಾ? ಕನೆಕ್ಷನ್ ಸಿಕ್ಕಿತಾ?'

'ಹೌದು ಸರ್, ನಿನ್ನೆ ಸಾಯಂಕಾಲವೇ ಮಾತಾಡಿದೆ.'

'ಹಾಗಿದ್ದರೆ?' ಎಂದ ಸರ್ಫರಾಜ್ ಒಮ್ಮೆಲೇ ಸುಮ್ಮನಾದರು ಹಾಗೂ ಇಷ್ಟೊಂದು ವ್ಯಕ್ತಿಗತವಾದ ಪ್ರಶ್ನೆಗಳನ್ನು ಕೇಳಬೇಕೋ ಬೇಡವೋ ಎಂದು ಕ್ಷಣಕಾಲ ಯೋಚಿಸಿದರು.

ನಸೀಮ್‌ನ ಕಣ್ಣುಗಳು ಅದೇಕೋ ಒಂದಿಷ್ಟು ಉದಾಸವಾಗಿರುವಂತೆ ಕಂಡವು. ಪರ್ವತದ ಹಿಮಾಚ್ಛಾದಿತ ಶಿಖರದ ತುದಿಯಿಂದ ಪಕ್ಷಿಯೊಂದು ಮುಗಿಲಿನ ಆಳಕ್ಕೆ ಮುಳುಗು ಹಾಕುತ್ತ ಕೆಳಗಿಳಿಯುತ್ತಿತ್ತು. ಆತ ಅದನ್ನು ನೋಡುತ್ತಲೇ ಮೌನಕ್ಕೆ ಜಾರಿದ. ಮುಂದೆ ನಿಧಾನಕ್ಕೆ 'ಸದ್ಯಕ್ಕಂತೂ ನಸೀಬುನ್ ನಮ್ಮ ಮನೆಯಲ್ಲಿಯೇ ಇದ್ದಾಳೆ. ಅವಳ ಗಂಡ ಮುಂದೇನು ಮಾಡುತ್ತಾನೆ ಎಂಬುದಂತೂ ಗೊತ್ತಿಲ್ಲ. ಆತ ತನ್ನ ಮನೆಗೂ ಪತ್ರ ಬರೆಯುವುದಿಲ್ಲವೆಂದು ಯಾರಿಂದಲೋ ಕೇಳಿದ್ದೆ. ಇದು ಎಷ್ಟು ಸತ್ಯ, ಎಷ್ಟು ಸುಳ್ಳು ಎಂಬುದು ತಿಳಿಯದು' ಎಂದ.

ಸರ್ಫರಾಜ್ ಒಂದು ದೀರ್ಘವಾದ ನಿಟ್ಟುಸಿರುಬಿಟ್ಟು, 'ಹಾಗಿದ್ದರೆ ಅವನ ಎರಡು ಮಕ್ಕಳ ಪಾಲನೆ ಪೋಷಣೆಯ ಜವಾಬ್ದಾರಿಯೂ ನಿನ್ನ ಹೆಗಲಿಗೇ ಇದೆ' ಎಂದರು.

'ವಾಲೆಕುಮ್ ಸಲಾಮ್ ಕರ್ನಲ್ ಸಾ... ಬ್...' ಎನ್ನುತ್ತ ಒಬ್ಬ ನಡುವಯಸ್ಸಿನ ವ್ಯಕ್ತಿ ನಮಾಜ್ ಮುಗಿಸಿಕೊಂಡು ಬಂದು, ಅವನ ಎದುರಿಗೆ ನಿಂತ.

'ನಿನ್ನ ಪ್ರಕರಣ ಎಲ್ಲಿಗೆ ಬಂತು? ಮನೆಯಿಂದೇನಾದರೂ ಸುದ್ದಿ, ಸಮಾಚಾರ?'

'ಇಂಥ ಇಳಿವಯಸ್ಸಿನಲ್ಲಿ ನನ್ನ ತಂದೆ ಆ ಜಮೀನ್ದಾರನ ಜೊತೆಗೆ ಸೆಣಸಾಡಲು ಸಾಧ್ಯವೆ? ಪೊಲೀಸರೂ ಜಮೀನ್ದಾರನ ಜೊತೆಗಿದ್ದಾರೆ.'

'ಅಲ್ಲ, ಪ್ರಕರಣ ಅಂಥ ಗಂಭೀರವಾಗಿಲ್ಲ, ತೀರ ಸಾಮಾನ್ಯವೆಂದು ನಾನು ಕೇಳಿದ್ದೆ.'

'ಹೌದು ಸರ್, ಆಗಿದ್ದಿಷ್ಟೇ, ಬದರುದ್ದೀನ್ ಖಾನ್ ಅಲಿ ತನ್ನ ಎಮ್ಮೆಗಳನ್ನು ನಮ್ಮ ಹೊಲದಲ್ಲಿ ಕಟ್ಟಲಾರಂಭಿಸಿದ. ಮುಂದೆ ಅವು ಹೊಲದ ಬೆಳೆಯನ್ನೆಲ್ಲ ತಿಂದು ಮೇಯತೊಡಗಿದವು. ಅದು ಅವರಿಗೆ ಪೂರ್ವಜರಿಂದ ಬಳುವಳಿಯಾಗಿ ಬಂದ ಆಸ್ತಿ ಎಂದು ಈಗ ವಾದ ಮಾಡುತ್ತಿದ್ದಾರೆ. ಆದರೆ, ಕಾಗದದಲ್ಲಿ ನೆಲ ಅಬ್ಬೂನ ಹೆಸರಿಗಿದೆ. ಗ್ರಾಮಲೆಕ್ಕಿಗ, ಪೊಲೀಸು ಎಲ್ಲ ಅವರ ಕಡೆಗಿದ್ದಾರೆ. ಈಗ ಸರಕಾರಿ ಕಾಗದಪತ್ರಗಳಲ್ಲಿ ಅದೇನೇನು ಕಿತಾಪತಿ ಮಾಡಿದ್ದಾರೋ ಗೊತ್ತಿಲ್ಲ.'

ಮಾತುಕತೆಗಳ ನಡುವೆಯೇ ಮುಂದಿನ ಶಿಫ್ಟ್‌ನ ಸೈನಿಕರು ಬಂದಿದ್ದರು. ಸರ್ಫರಾಜ್ ಇವರೊಂದಿಗೆ ನಡೆಯುತ್ತ ಬಲೂತ, ಓಕ್ ಹಾಗೂ ಚಿನಾರ ವೃಕ್ಷಗಳ ಮಗ್ಗುಲುಗಳಿಂದ ಹಾಯ್ದು ಕೆಳಕೆಳಕ್ಕೆ ಹೊರಟು ಬಂಕರ್ ತಲುಪಿದರು. ಹೇಗೂ ಸಾಯಂಕಾಲದ ಏಳು ಗಂಟೆಗೂ ಮೊದಲೇ ಊಟವಾಗುತ್ತದೆ, ನಂತರ ಕೇಂದ್ರಕಚೇರಿಯನ್ನು ಸಂಪರ್ಕಿಸಬೇಕು, ಇಲ್ಲಿನ ವರದಿ ಕೊಡಬೇಕು, ಅಲ್ಲಿನ ಆದೇಶಗಳನ್ನು ಕೇಳಬೇಕು... ಎಂದುಕೊಂಡರು.